C.C.. No. 605/2024 CW: 3 ,PW: 3

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 605/2024
ಸಿ.ಡಬ್ಲ್ಯೂಃ 3
ಪಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರುಃ ವಾಣಿಶ್ರೀ

ಗಂಡನ ಹೆಸರುಃ ಸಂದೀಪ್

ವಯಸ್ಸುಃ 30 ವರ್ಷ

ಉದ್ಯೋಗಃ ಮನೆವಾರ್ತೆ

ವಾಸಸ್ಥಳಃ ಮುಂಡೂರು ಗ್ರಾಮ

ದಿನಾಂಕ 11-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರ ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು. ಚಾ.ಸಾ.1 ನನ್ನ ಬಾವ. ಚಾ.ಸಾ.5 ನನ್ನ ಮಾವ. ಚಾ.ಸಾ.2 ನನ್ನ ಅತ್ತೆ. ಮತ್ತು ಚಾ.ಸಾ.4 ನನ್ನ ಅಕ್ಕ. ಚಾ.ಸಾ.6 ನನ್ನ ಗಂಡ. ನಮ್ಮ ಮನೆ ಮುಂಡೂರು ಗ್ರಾಮದ ಬರೆಕೋಡಿ ಎಂಬಲ್ಲಿ ಇದೆ. ಅಲ್ಲಿ ನಾನು, ಚಾ.ಸಾ.1, 2, ಮತ್ತು , ಚಾ.ಸಾ.4 ರಿಂದ ಚಾ.ಸಾ.6 ರವರ ಜೊತೆ ವಾಸವಾಗಿದ್ದೇನೆ.

ನಮ್ಮ ಮತ್ತು ಆರೋಪಿತರ ನಡುವೆ ಜಾಗದ ಬಗ್ಗೆ ತಕರಾರು ಇಲ್ಲ. ಆರೋಪಿತರು ಚಾ,ಸಾ.1 ರವರನ್ನು ತಡೆದು ನಿಲ್ಲಿಸಿ ಮರದ ದೊಣ್ಣೆಯಿಂದ , ಹೆಲ್ಮೆಟ್ ನಿಂದ ಹಾಗೂ ಕೈಯಿಂದ ಹಲ್ಲೆ ಮಾಡಿಲ್ಲ, ಜೀವಬೆದರಿಕೆ ಹಾಕಿಲ್ಲ. ಚಾ,ಸಾ,2 ರವರಿಗೆ ಮರದ ದೊಣ್ಣೆಯಿಂದ ಆರೋಪಿತರು ಹಲ್ಲೆ ಮಾಡಿಲ್ಲ.

ಸುಮಾರು 2 ವರ್ಷಗಳ ಹಿಂದೆ ಚಾ,ಸಾ.2 ರವರು ಚಾ.ಸಾ.1 ರವರ ಜೊತೆ ಮೋಟಾರ್ ಸೈಕಲಿನಲ್ಲಿ ಸಹ ಸವಾರಳಾಗಿ ಹೋಗುತ್ತಿರುವಾಗ ಬೈಕ್ ಸ್ಕಿಡ್ ಆಗಿ ಚಾ.ಸಾ.2 ಮತ್ತು ಚಾ,ಸಾ.1 ರವರಿಗೆ ಗಾಯಗಳಾಗಿದ್ದು ಆಗ ನನ್ನ ಗಂಡ ಅಲ್ಲಿಗೆ ಬಂದು ಅವರನ್ನು ಪುತ್ತೂರಿನ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ

ದಾಖಲು ಮಾಡಿದ್ದರು ಚಾ.ಸಾ.1 ರವರ ಹಣೆಗೆ , ಬೆನ್ನಿಗೆ ಹಾಗೂ ಎದೆಗೆ ಗಾಯವಾಗಿತ್ತು. ಚಾ.ಸಾ.2 ರವರ ಬೆನ್ನಿಗೆ ಹಾಗೂ ಎಡಕಾಲಿಗೆ ಗಾಯಗಳಾಗಿತ್ತು.

ನಾನು ಪೊಲೀಸರಿಗೆ ಯಾವುದೇ ಹೇಳಿಕೆಕೊಟ್ಟಿಲ್ಲ. ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ಹೆಲ್ಮೆಟ್ , ಮರದ ದೊಣ್ಣೆ ,ಕುಟ್ಟಿಕತ್ತಿ ಹಾಗೂ ವಾಚನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 15-01-2024 ರಂದು ಸಂಜೆ 07.30 ಗಂಟೆಗೆ ಮುಂಡೂರು ಗ್ರಾಮದ ಬರೆಕೋಲಾಡಿ ಎಂಬಲ್ಲಿ 1ನೇ ಆರೋಪಿಯ ಜಾಗದಲ್ಲಿರುವ ರಸ್ತೆಯಲ್ಲಿ ನಾನು ಮತ್ತು ಚಾ,ಸಾ.2, ಚಾ.ಸಾ.4 ಮತ್ತು ಚಾ.ಸಾ. 5 ರವರು ಅಟೋ ರಿಕ್ಷಾದಲ್ಲಿ ಮರದ ಮಂಚವನ್ನು ತಂದ ವಿಚಾರವಾಗಿ ಆರೋಪಿಗಳು ನಮ್ಮ ಜೊತೆ ಜಗಳ ಮಾಡಿರುವ ವಿಚಾರವನ್ನು ಚಾಸಾ.4 ರವರು ಚಾ.ಸಾ.1 ರವರಿಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ರಾತ್ರಿ 08.00 ಗಂಟೆಯಿಂದ 08.15ರ ಮಧ್ಯದಲ್ಲಿ ನಾನು , ಚಾ.ಸಾ.2 , ಚಾ,ಸಾ,4 ಮತ್ತು ಚಾ.ಸಾ. 5 ರವರು ಮನೆಯಲ್ಲಿ ಇದ್ದ ಸಮಯ ತೋಟದಿಂದ ಬೊಬ್ಬೆ ಶಬ್ದ ಕೇಳಿ ನಾವು ಅಲ್ಲಿಗೆ ಹೋಗಿ ನೋಡಿದಾಗ ಚಾ.ಸಾ.1 ರವರನ್ನು ಆರೋಪಿಗಳು ಕೃಷ್ಣ ನಾಯ್ಕ ಎಂಬುವವರಿಗೆ ಸೇರಿದ ಅಡಿಕೆ ತೋಟದ ಮಧ್ಯೆ ಇರುವ ಕಾಲುದಾರಿಯಲ್ಲಿ ತಡೆದು ನಿಲ್ಲಿಸಿ 1ನೇ ಆರೋಪಿಯು ಮರದ ದೊಣ್ಣೆಯಿಂದ ಚಾ.ಸಾ.1 ರವರ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2ನೇ ಆರೋಪಿಯು ಚಾ.ಸಾ,1ರವರ ಕೈಯಲ್ಲಿದ್ದ ಹೆಲ್ಮೆಟ್ ನ್ನು ಎಳೆದುಕೊಂಡು ಅದೇ ಹೆಲ್ಮೆಟ್ನಿಂದ ಚಾ.ಸಾ,1ರವರ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾ.ಸಾ,1ರವರು ಬೊಬ್ಬೆ ಹಾಕಿದಾಗ ಚಾ.ಸಾ.2ರವರು ಸ್ಥಳಕ್ಕೆ ಬಂದಾಗ 1ನೇ ಆರೋಪಿ ಮರದ ದೊಣ್ಣೆಯಿಂದ ಚಾ.ಸಾ.2ರವರ ಎಡಕಾಲಿಗೆ ಹೊಡೆದಿರುವುದು ಅಲ್ಲದೆ 3ನೇ ಆರೋಪಿ ಕೈಯಿಂದ ಚಾ.ಸಾ,1ರವರ ಬೆನ್ನಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯ ನಮ್ಮ ಬೊಬ್ಬೆ ಕೇಳಿ ನಾನು , ಚಾ.ಸಾ.4 ಮತ್ತು ಚಾ.ಸಾ.5 ರವರು ಬರುವುದನ್ನು ನೋಡಿ 3ನೇ ಆರೋಪಿಯು ತನ್ನ ಕೈಯಲ್ಲಿದ್ದ ಕತ್ತಿಯನ್ನು ಹಿಡಿದು ನಮ್ಮನ್ನು ಸಾಯಿಸುತ್ತೇನೆ ಎಂದು ಜೀವಬೆದರಿಕೆ

ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಸ್ವತ್ತುಗಳನ್ನು ಅಲ್ಲೇ ಬಿಸಾಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ.

ಚಾ.ಸಾ.1 ಮತ್ತು ಚಾ.ಸಾ.2 ರವರನ್ನು ಚಾ,ಸಾ.6 ರವರು ಅಟೋ ರಿಕ್ಷಾದಲ್ಲಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 17-01-2024 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ಮೇಲೆ ಕಾಣಿಸಿದ ವಿಳಾಸದಲ್ಲಿ ------------------------------------------------------- ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ.'' ಎಂದು ಹೇಳಿಕೆಯನ್ನು ಪೊಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು.

ಆರೋಪಿತರೊಂದಿಗೆ ಪ್ರಸ್ತುತ ರಾಜಿಯಾಗಿದ್ದೇವೆ. ಆರೋಪಿತರೊಂದಿಗೆ ರಾಜಿಯಾದ ಕಾರಣ ಅವರನ್ನು ಶಿಕ್ಷೆಯಿದ ರಕ್ಷಿಸುವ ಸಲುವಾಗಿ ಆರೋಪಿಗಳು ನಮ್ಮ ವಿರುದ್ಧ ಅಪರಾಧಿಕ ಕೃತ್ಯಗಳನ್ನು ಎಸೆಗಿದರೂ ಕೂಡಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ.ಅರ್.ಎನ್. ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.